ಓ.ಎಸ್.211/2009 Dw1

<u>ದಿನಾಂಕ 03-08-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮು. ಪಾಟಿ ಸವಾಲುಃ ಶ್ರೀ ಎಸ್.ಎಸ್.ವಾದಿ ಪರ ವಕೀಲರಿಂದ</u>

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ದಿಃ29.06.2000 ಆಗಿರುವ ವಿಬಾಗ ಪತ್ರದ ನಕಲು ಪ್ರತಿಯನ್ನು ಪಡೆದಿದ್ದೇನೆ. ಮೂಲ ಪ್ರತಿಯನ್ನು ಪಡೆದುಕೊಂಡಿಲ್ಲ. ಸದರಿ ನಕಲು ಪ್ರತಿಯನ್ನು ಪಡೆದಾಗ ವಾದಿಗಳು ಸಹಿಯನ್ನು ಸದರಿ ದಾಖಲೆಗೆ ಮಾಡಿರುವ ಬಗ್ಗೆ ಖಾತ್ರಿ ಪಡೆಸಿಕೊಂಡಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೋಡಿದ್ದೇನೆ ವಾದಿಯು ಸಹಿ ಮಾಡಿಲ್ಲ ಆದರೆ ವಾದಿ ಅವರ ತಂದೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ದಿಃ29-06-2000 ರಂದು ಆಗಿದೇ ಎಂದು ಹೇಳಲಾದ ಪಾಲು ಪಟ್ಟಿ ಆಗಿರುವುದೇ ಇಲ್ಲ ಮತ್ತು ನಾನು ಅದರ ನಕಲನ್ನು ಪಡೆದಿಲ್ಲ ಮತ್ತು ನಾನು ಹೇಳಿದಂತೆ ವಾದಿಯ ತಂದೆ ಸಹಿ ಮಾಡಿರುವುದಿಲ್ಲ ಕಾರಣ 2000 ಇಸವಿ ಮುಂಚೆಯೇ ವಾದಿಗಳ ತಂದೆ ಮೂಗೇಗೌಡ ಮರಣ ಹೊಂದಿದ್ದರು ಎಂದರೆ ಸರಿಯಲ್ಲ. ನಾನು ಜಮೀನು ಖರೀದಿ ಮಾಡುವ ಕಾಲಕ್ಕೆ ಪಾಪೇಗೌಡರ ಕುಟುಂಬಕ್ಕೆ ಸಂಬಂಧಿಸಿ ವಂಶವೃಕ್ಷವನ್ನು ಪಡೆದಿದ್ದೇನೆ. ಸದರಿ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ದಾವಾ .1 ಸ್ವತ್ತನ್ನು ಖರೀದಿ ಮಾಡುವ ಪೂರ್ವ ಸಾವರ್ಜನಿಕರಿಗೆ ಪತ್ರಿಕಾ ಹೇಳಿಕೆ ನೀಡಿಲ್ಲ. ನನ್ನ ಪ್ರಮಾಣಪತ್ರಿಕೆಯಲ್ಲಿ ಸೈಯದ್ ಖಾಸಿಂ ಜಿ.ಪಿ.ಎ ಅನ್ನು ಯಾವ ದಿನಾಂಕದಂದು ಮಾಡಿಕೊಡಲಾಗಿದೆ ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ-1 ಸ್ವತ್ತನ್ನು ಖರೀದಿ ಮಾಡಲು ಸೈಯದ್ ಖಾಸಿಂ ರವರಿಗೆ ಜಿ.ಪಿ.ಎ ಅದನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಕೃಷಿಕನಲ್ಲದ ಕಾರಣ ಸೈಯದ್ ಖಾಸಿಂ ರವರಿಗೆ ಜಿ.ಪಿ.ಎ. ಮಾಡಿಕೊಟ್ಟಿಲ್ಲ ಆದರೂ ಕ್ರಯಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಗಳ ಹಕ್ಕನ್ನು ದಾವಾ-1 ನೇ ಸ್ವತ್ತಿನಲ್ಲಿ ಮೊಟಕು ಗೊಳಿಸುವ ಉದ್ದೇಶದಿಂದ ನಾನು ಮತ್ತು 1

ರಿಂದ 5 ನೇ ಪ್ರತಿವಾದಿಗಳು ಸೇರಿ ನಿ.ಪಿ.3 ಕ್ರಯಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುವ ಆಸ್ತಿಯಲ್ಲಿ ವಾದಿಗಳು ಸಹ ಹಕ್ಕುದಾರರಾಗಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ-1 ರವರಿಗೆ ಬಂದಂತಹ ದಾವಾ-1 ಸ್ವತ್ತು ಯಾರಿಂದ ಬಂದಿತ್ತು ಎಂದು ದೃಢೀಕರಿಸಿಕೊಳ್ಳಲು ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

ವಾದಿಗಳ ತಾತನ ಹೆಸರು ಚಿಕ್ಕತಮ್ಮೇಗೌಡ ಅಲಿಯಾಸ್ ಮಹಂತೇಗೌಡ ಅಂದರೆ ಸಾಕ್ಷಿಯು ಚಿಕ್ಕತಮ್ಮೇಗೌಡ ಎಂದು ಗೊತ್ತಿದೆ ಎಂದು ನುಡಿಯುತ್ತಾರೆ. ನಿ.ಡಿ.10 ರಲ್ಲಿ ಹೆಸರಿಸಿರುವ ಮಹಂತೇಗೌಡ ಎನ್ನುವವರು ವಾದಿಗಳ ತಾತ ಎಂದರೆ ಸರಿ. 1 ನೇ ಪ್ರತಿವಾದಿಯವರ ತಂದೆಯ ಹೆಸರಿನಲ್ಲಿ ದಾವಾ-1 ಸ್ವತ್ತು ಇತ್ತು ಎನ್ನುವುದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟದ್ದೀರಾ ಎಂದರೆ ರೆವಿನ್ಯೂ ದಾಖಲಾತಿಗಳನ್ನು ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದು ಪಾಟಿ ಸವಾಲಿಗೆ ಮುಂದೂಡಲಾಗಿದೆ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಪ್ರದಾನ ಸಿಜೆ, ಶ್ರೀರಂಗಪಟ್ಟಣ